## ಆಕರ ಕೋಶದಿಂದ ಮೆದುಳಿನ ದುರಸ್ತಿ!

ಆಕರ ಕೋಶ ಸಂಶೋಧಕರು ಆರೋಗ್ಯ ಕ್ಷೇತ್ರದಲ್ಲೊಂದು ಹೊಸ ಹೆಜ್ಜೆ ಇಟ್ಟಿದ್ದಾರೆ. ಮನುಷ್ಯನ ದೇಹದ ಪ್ಲೂರಿಪೊಟೆಂಟ್ (ಕೆಂಪು ರಕ್ತ ಕಣ, ಬಿಳಿ ರಕ್ತ ಕಣ, ಪ್ಲೇಟ್‌ಲೆಟ್‌ಗಳ ಜನಕ) ಆಕರ ಕೋಶದ (ಎಚ್‌ಪಿಎಸ್) ಮೂಲಕ ದೇಹದ ಯಾವುದೇ ಅಂಗದ ಜೀವಕೋಶಗಳನ್ನು ಉತ್ಪತ್ತಿ ಮಾಡುವ ಹೊಸ ವಿಧಾನವನ್ನು ಕಂಡು ಹಿಡಿದಿದ್ದಾರೆ.

ಈ ಮೂಲಕ ಎಚ್‌ಪಿಎಸ್ ಬಳಸಿ ಬೆನ್ನುಹುರಿ ಗಾಯ, ಪಾರ್ಕಿನ್ಸನ್ ಕಾಯಿಲೆ, ಸುಟ್ಟ ಗಾಯ, ಹೃದಯ ಸಂಬಂಧಿ ಕಾಯಿಲೆ, ಮಧುಮೇಹ, ಆರ್ಥ್ರೈಟಿಸ್ ಹಾಗೂ ಇನ್ನಿತರ ಕಾಯಿಲೆಗಳನ್ನು ಗುಣ ಪಡಿಸಬಹುದಾದ ಭರವಸೆಯನ್ನು ಈ ಸಂಶೋಧನೆ ಮೂಡಿಸಿದೆ. ಆದರೆ ಎಚ್‌ಪಿಎಸ್ ಬಳಕೆ ಅಷ್ಟು ಸುಲಭದ್ದಲ್ಲ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ. ಏಕೆಂದರೆ ಜೀವಕೋಶಗಳನ್ನು ಪ್ರತ್ಯೇಕವಾಗಿ ಬೆಳೆಸಿದಲ್ಲಿ ಸುಲಭವಾಗಿ ಜೀವ ಉತ್ಪತ್ತಿಯಾಗುತ್ತದೆ. ಇದೇ ಮಾದರಿಯನ್ನು ಭ್ರೂಣ ಆಕರ ಕೋಶ ಹಾಗೂ ಮನುಷ್ಯನ ಕೃತಕ ಪ್ಲೂರಿಪೊಟೆಂಟ್ ಆಕರ ಕೋಶ ಎರಡರ ಮೇಲೂ ಪ್ರಯೋಗಿಸಲಾಗಿದೆ.

ಹೀಗೆ ಆಕರ ಕೋಶದ ಬಳಕೆಯಿಂದ ಮೆದುಳಿನ ದುರಸ್ತಿಯನ್ನೂ ನಡೆಸಬಹುದಾದ ಮತ್ತೊಂದು ಗುಣಾತ್ಮಕ ಅಂಶವನ್ನು ಆಕ್ಲಂಡ್ ವಿಶ್ವವಿದ್ಯಾಲಯದ ಫಾರ್ಮಾಲಜಿ ವಿಭಾಗದ ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಜತೆಜತೆಗೆ ವಯಸ್ಕ ಇಲಿಯ ಸ್ತನದ ಆಕರ ಕೋಶ ಪಡೆದು ನಡೆಸಿದ ಸಂಶೋಧನೆಯಿಂದ ಸ್ತನ ಕ್ಯಾನ್ಸರ್ ಕೂಡ ನಿವಾರಿಸಬಹುದಾದ ಅಂಶವನ್ನು ಪತ್ತೆಹಚ್ಚಲಾಗಿದೆ. ಈ ಎಲ್ಲಾ ಸಂಶೋಧನೆಗಳ ಒಟ್ಟು ಸಾರಾಂಶದ ಪ್ರಕಾರ ಮುಂಬರುವ ದಿನಗಳಲ್ಲಿ ಆಕರ ಕೋಶದ ಮೂಲಕ ಎಂಥದ್ದೇ ಕಾಯಿಲೆಗಳನ್ನು ಸಮರ್ಥವಾಗಿ ಎದುರಿಸುವ ಭರವಸೆಯನ್ನು ವಿಜ್ಞಾನಿಗಳು ಹಾಗೂ ವೈದ್ಯರು ನೀಡಿದ್ದಾರೆ.

## ಕೊಬ್ಬಿನ ಔಷಧದಿಂದ ಸಂಧಿವಾತ ನಿವಾರಣೆ

ಸಂಧಿವಾತಕ್ಕೆ ಪಡೆಯುವ ಔಷಧದಿಂದ ಹೃದಯ ಸಂಬಂಧಿ ಕಾಯಿಲೆ ಹಾಗೂ ಪಾರ್ಶ್ವವಾಯು ಸಾಧ್ಯತೆ ಅಧಿಕ ಎಂಬ ನಂಬಿಕೆ ಇದೆ. ಆದರೆ ಕೊಬ್ಬು ಕರಗಿಸಬಹುದಾದ ಸ್ಟ್ಯಾಟಿನ್ಸ್ ಔಷಧದಿಂದ ಸಂಧಿವಾತ ನಿವಾರಿಸಬಹುದಾದ ಹೊಸ ಸುದ್ದಿ ವಿಜ್ಞಾನ ಕ್ಷೇತ್ರದಲ್ಲಿ ಹರಿದಾಡತೊಡಗಿದೆ.

ಇಸ್ರೇಲ್‌ನ ಸಂಶೋಧಕರು 20 ಲಕ್ಷ ಮಂದಿಯ ಆರೋಗ್ಯ ವರದಿಗಳನ್ನು ಆಧರಿಸಿ ವರದಿ ಸಿದ್ಧಪಡಿಸಿದ್ದಾರೆ. ಇದರ ಪ್ರಕಾರ ನಿಯಮಿತವಾಗಿ ಕೊಬ್ಬು ನಿಯಂತ್ರಣ ಔಷಧ ಸೇವಿಸುವ ಶೇಕಡಾ 42ರಷ್ಟು ಮಂದಿಯಲ್ಲಿ ಸಂಧಿವಾತ ಗಣನೀಯವಾಗಿ ತಗ್ಗಿರುವ ಅಂಶ ಪತ್ತೆಯಾಗಿದೆ. ಸಂಧಿವಾತ ಪುರುಷರಿಗಿಂತ ಮಹಿಳೆಯರನ್ನೇ ಕಾಡಿದ ಉದಾಹರಣೆಗಳೇ ಹೆಚ್ಚು. ದೇಹದ ಪ್ರತಿರಕ್ಷಿತ ವ್ಯವಸ್ಥೆಯು ಸಂಧಿಗಳ ಮೇಲೆ ದಾಳಿ ನಡೆಸಿ ಸಂಧಿಗಳಲ್ಲಿ ಊತ, ನೋವು ಹಾಗೂ ಬಿಗಿದ ಅನುಭವವಾಗುತ್ತದೆ. ಆದರೆ ಕೊಬ್ಬು ನಿಯಂತ್ರಣಕ್ಕೆ ಬಳಸುವ ಸ್ಟ್ಯಾಟಿನ್ ಔಷಧದ ಬಳಕೆಯಿಂದ ಸಂಧಿವಾತ ನಿಯಂತ್ರಣ ಸಾಧ್ಯ ಎಂಬ ವರದಿ ಅನೇಕರಿಗೆ ಉಪಶಮನ ನೀಡಿದೆ. ಆದರೆ ಅದಿನ್ನೂ ಸಂಶೋಧನೆಯ ಹಾದಿಯಲ್ಲಿದೆ.

## ಮುಖದ ಕ್ಯಾನ್ಸರ್‌ಗೆ ರೊಬೊಟಿಕ್ ಶಸ್ತ್ರಚಿಕಿತ್ಸೆ

ತಲೆ ಹಾಗೂ ಮುಖಕ್ಕೆ ತಗುಲಿದ ಕ್ಯಾನ್ಸರ್ ಗೆಡ್ಡೆಯನ್ನು ಕಲೆ ಇಲ್ಲದೆ ತೆಗೆದು ಹಾಕುವ ರೊಬೊಟಿಕ್ ಶಸ್ತ್ರಚಿಕಿತ್ಸೆ ವಿಧಾನವನ್ನು ವೈದ್ಯರು ಅಭಿವೃದ್ಧಿಪಡಿಸಿದ್ದಾರೆ. ಈ ಮೂಲಕ ರೋಗಿಗಳು ಮಾತಾಡುವುದರ ಜತೆಗೆ ಎಲ್ಲರಂತೆ ಊಟ ಮಾಡುವ ಸಾಮರ್ಥ್ಯ ಪಡೆದುಕೊಳ್ಳಲಿದ್ದಾರೆ.

ಇಂಥ ವಿನೂತನ ಸಾಹಸಕ್ಕೆ ಕೈ ಹಾಕಿದ ಕೀರ್ತಿ ಡೆಟ್ರಾಯ್ಟ್‌ನ ಹೆನ್ರಿ ಫೋರ್ಡ್ ಆಸ್ಪತ್ರೆಯ ವೈದ್ಯರಿಗೆ ಸಲ್ಲುತ್ತದೆ. ಟ್ರಾನ್ಸ್ ಓರಲ್ ರೊಬೊಟಿಕ್ ಸರ್ಜರಿ (ಟಿಒಆರ್‌ಎಸ್) ಎಂಬ ಈ ನೂತನ ಶಸ್ತ್ರಚಿಕಿತ್ಸೆಯನ್ನು ಡಾ ವಿಂಚಿ ಶಸ್ತ್ರಚಿಕಿತ್ಸೆ ವಿಧಾನದ ಮೂಲಕ ನಡೆಸಲಾಯಿತು. ಈ ಶಸ್ತ್ರಚಿಕಿತ್ಸೆಯ ಮೂಲಕ ಬಾಯಿ, ನಾಲಿಗೆ, ಗಂಟಲ ಗ್ರಂಥಿ ಹಾಗೂ ಗಂಟಲಿನ ಇನ್ನಿತರ ಭಾಗಗಳಿಗೆ ಶಸ್ತ್ರಚಿಕಿತ್ಸೆ ನಡೆಸಬಹುದು. ಜತೆಗೆ ಶಸ್ತ್ರ ಚಿಕಿತ್ಸೆಯ ನೋವನ್ನು ನಿವಾರಿಸುವ ದೃಷ್ಟಿಯಿಂದ ನರ ಹಾಗೂ ಕೋಶ ಪುಂಜಗಳಿಗೆ ಯಾವುದೇ ಹಾನಿಯಾಗದಂತೆ ಎಚ್ಚರ ವಹಿಸಲಾಗಿತ್ತು. ಇದೀಗ ಒಂದು ಡಜನ್ನಿಗಿಂತಲೂ ಅಧಿಕ ಇಂಥ ಶಸ್ತ್ರಚಿಕಿತ್ಸೆ ನಡೆಸಿರುವುದಾಗಿ ಆಸ್ಪತ್ರೆಯ ಸಿಬ್ಬಂದಿ ಹೇಳಿದ್ದಾರೆ.

■ ಐಎಎನ್‌ಎಸ್

